ದಿನಾಂಕಃ 11-09-2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

**<u>ಪಾಟೀ ಸವಾಲುಃ</u>- 6 ಮತ್ತು 7 ನೇ ಪ್ರತಿವಾದಿ ಪರವಾಗಿ ಶ್ರೀ. ಜಿ.ಎಸ್.ಆರ್. ಅವಕೀಲರಿಂದಃ-**

ನಾನು ವಾದ ಪತ್ರ ಮತ್ತು ಸಾಕ್ಷ್ಯ ಪ್ರಮಾಣ ಪತ್ರದಲ್ಲಿ ನಮ್ಮ ಕುಟುಂಬದ ವಂಶವೃಕ್ಷವನ್ನು ತಪ್ಪಾಗಿ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ. ನಾನು ಪದವಿವರೆಗೆ ವಿದ್ಯಾಭ್ಯಾಸ ಮಾಡಿರುತ್ತೇನೆ. ನನ್ನ ತಂದೆಯ ಹೆಸರು ದಾಸಪ್ಪ.ಜಿ.ಎಲ್. ಆಗಿರುತ್ತದೆ. ನನ್ನ ತಾತನ ಹೆಸರು ರಾಮಣ್ಣ ಆಗಿರುತ್ತದೆ. ನನ್ನ ತಾತನಿಗೆ ಒಟ್ಟು 4 ಜನ ಅಣ್ಣ ತಮ್ಮಂದಿರು ಇದ್ದರು. ಮೊದಲನೇಯವರು ಹೆಸರು ಉಗ್ರಪ್ಪ, ಎರಡನೆಯವರು ಎಳೆನರಸಪ್ಪ, ಮೂರನೇಯವರು ರಾಮಣ್ಣ ಅಂದರೆ ನನ್ನ ತಾತ, ನಾಲ್ಕನೆಯವರು ಲಕ್ಷ್ಮಯ್ಯ ಆಗಿರುತ್ತಾರೆ. ನನ್ನ ತಾತನ ತಾತನ ಹೆಸರು ದಾಸಪ್ಪ ಎಂದರೆ ಸರಿಯಲ್ಲ. ನನ್ನ ತಾತನ ತಾತನ ಹೆಸರು ನನಗೆ ಗೊತ್ತಿಲ್ಲ. ನಮ್ಮ ಕುಟುಂಬದ ಮೂಲ ಪುರಷನ ಹೆಸರು ರಾಮಣ್ಣ ಎಂದರೆ ಸರಿಯಲ್ಲ. ರಾಮಣ್ಣನವರಿಗೆ ದಾಸಪ್ಪ ಮತ್ತು ಅಕ್ಕಣ್ಣಪ್ಪ ಎಂಬ ಮಕ್ಕಳಿದ್ದರು ಎಂದರೆ ನನಗೆ ಗೊತ್ತಿಲ್ಲ. ಆ ಅಕ್ಕಣ್ಣಪ್ಪರವರಿಗೆ ಮಕ್ಕಳಿರಲಿಲ್ಲ ಎಂದರೆ ನನಗೆ ಗೊತ್ತಿಲ್ಲ. ಆ ದಾಸಪ್ಪನಿಗೆ ಉಗ್ರಪ್ಪ, ಎಳೆನರಸಪ್ಪ, ರಾಮಣ್ಣ ಮತ್ತು ಲಕ್ಷ್ಮಯ್ಯ ಎಂಬ ಮಕ್ಕಳುಗಳು ಎಂದರೆ ಸರಿಯಲ್ಲ. ನನ್ನ ತಾತ ದಾಸಪ್ಪ ಒಬ್ಬನೇ ಮಗನಾಗಿದ್ದು ಆತನಿಗೆ ಯಾರು ಅಣ್ಣ ತಮ್ಮಂದಿರು ಇರಲಿಲ್ಲ. ನನ್ನ ತಾತನ ತಂದೆಯ ಹೆಸರು ನನಗೆ ಗೊತ್ತಿಲ್ಲ.

ಡಿ.ಆರ್.ಶ್ರೀನಿವಾಸ್ ಮತ್ತು ರವಿಕುಮಾರ್ ರವರ ತಂದೆ ಹೆಸರು ರಾಮಣ್ಣ ಎಂಬದುದಾಗಿರುತ್ತದೆ. ಇವರಿಗೆ ವಿಮಲ ಎಂಬ ತಂಗಿ ಇದ್ದಾರೆ ಎಂದರೆ ಸರಿ. ರಾಮಣ್ಣನವರ ತಂದೆಯ ಹೆಸರು ನರಸಪ್ಪ ಎಂಬುದಾಗಿರುತ್ತದೆ. ಆ ನರಸಪ್ಪನಿಗೆ ಲಕ್ಷ್ಮೀನರಸಪ್ಪ ಎಂಬ ಒಬ್ಬ ತಮ್ಮ ಇದ್ದರು ಎಂದರೆ ಗೊತ್ತಿಲ್ಲ. ನರಸಿಂಹಮೂರ್ತಿ ಮತ್ತು ಪುಟ್ಟಣ್ಣ ಅಣ್ಣ ತಮ್ಮಂದಿರಾಗಿದ್ದು ಅವರುಗಳು ಗೊತ್ತು. ಅವರ ತಂದೆಯ ಹೆಸರು ನನಗೆ ಗೊತ್ತಿಲ್ಲ. ಅವರ ತಂದೆ ಹೆಸರು ಲಕ್ಷ್ಮೀನರಸಪ್ಪ ಎಂದರೆ ನನಗೆ ಗೊತ್ತಿಲ್ಲ. ನರಸಪ್ಪ ಮತ್ತು ಲಕ್ಷ್ಮೀನರಸಪ್ಪರವರ ತಂದೆಯ ಹೆಸರು ಉಗ್ರಪ್ಪ ಎಂದರೆ ನನಗೆ ಗೊತ್ತಿಲ್ಲ. ನಮ್ಮ ಕುಟುಂಬದಲ್ಲಿ ಎಳೆನರಸಪ್ಪ ಎಂಬುವವರು ಯಾರೂ ಸಹ ಇರುವುದಿಲ್ಲ. ನಮ್ಮ ಕುಟುಂಬದಲ್ಲಿ ನಾರಾಯಣಪ್ಪ ಎಂಬುವವರು ಇದ್ದು, ಅವರ ಹೆಂಡತಿ ಹೆಸರು ಗೌರಮ್ಮ ಎಂಬುದಾಗಿರುತ್ತದೆ. ನಾರಾಯಣಪ್ಪನವರ ತಂದೆಯ ಹೆಸರು ನನಗೆ ಗೊತ್ತಿಲ್ಲ. ನಾರಾಯಣಪ್ಪನವರ ತಂದೆ ಹೆಸರು ಎಳೆನರಸಪ್ಪ ಎಂದರೆ ನನಗೆ ಗೊತ್ತಿಲ್ಲ. ನಾರಾಯಣಪ್ಪ ಮತ್ತು ಗೌರಮ್ಮರವರಿಗೆ ಭಾಗ್ಯಮ್ಮ, ನರಸೇಗೌಡ, ಪ್ರಕಾಶ ಮತ್ತು ಶಾಂತರಾಜು ಎಂಬ ಮಕ್ಕಳಿದ್ದಾರೆ. ನರಸೇಗೌಡ, ಪ್ರಕಾಶ ಮತ್ತು ಶಾಂತರಾಜು ರವರು ಮೃತಪಟ್ಟಿದ್ದು ಅವರುಗಳ ಹೆಂಡತಿ ಮತ್ತು ಮಕ್ಕಳುಗಳು ಇನ್ನೂ ಜೀವಂತವಾಗಿದ್ದಾರೆ ಎಂದರೆ ಸರಿ. ಭಾಗ್ಯಮ್ಮ, ನರಸೇಗೌಡ, ಪ್ರಕಾಶ ಮತ್ತು ಶಾಂತರಾಜುರವರ ಮಕ್ಕಳುಗಳನ್ನು ಈ ದಾವೆಯಲ್ಲಿ ಪಕ್ಷಗಾರರನ್ನಾಗಿ ಸೇರ್ಪಡೆ ಮಾಡಿರುವುದಿಲ್ಲ. ಲಕ್ಷ್ಮೀಕಾಂತರಾಜುರವರಿಗೆ ರಮಾಮಣಿ ಮತ್ತು ಸೌಭಾಗ್ಯಮ್ಮ

ಎಂಬ ಅಕ್ಕಂದಿರು ಇದ್ದಾರೆ ಎಂದರೆ ಸರಿ. ಅವರನ್ನೂ ಸಹ ಈ ದಾವೆಯಲ್ಲಿ ಪಕ್ಷಗಾರರನ್ನಾಗಿ ಮಾಡಿರುವುದಿಲ್ಲ. ಲಕ್ಷ್ಮೀಕಾಂತರಾಜು, ರಮಾಮಣಿ ಮತ್ತು ಸೌಭಾಗ್ಯಮ್ಮರವರ ತಂದೆಯ ಹೆಸರು ಎಳೆನರಸಪ್ಪ ಎಂದರೆ ನನಗೆ ಗೊತ್ತಿಲ್ಲ. ಅಕ್ಕಣ್ಣಪ್ಪ ನನಗೆ ಗೊತ್ತು. ಅಕ್ಕಣ್ಣಪ್ಪನಿಗೆ 5 ಜನ ಅಣ್ಣ ತಮ್ಮಂದಿರಿದ್ದಾರೆ. ಎಳೆನರಸಪ್ಪ ಮತ್ತು 7 ನೇ ಪ್ರತಿವಾದಿ ಪರಸ್ಪರ ಅಣ್ಣ ತಮ್ಮಂದಿರು ಎಂದರೆ ಸರಿ. ಎಳೆನರಸಪ್ಪ ಮತ್ತು 7 ನೇ ಪ್ರತಿವಾದಿ ತಂದೆಯ ಹೆಸರು ಲಕ್ಷ್ಮಯ್ಯ ಎಂದರೆ ನನಗೆ ಗೊತ್ತಿಲ್ಲ.

ದಾವಾ ಐಟಂ ನಂ.1 ರ ಆಸ್ತಿ ದಾಸಪ್ಪನ ಮಗ ಲಕ್ಷ್ಮಯ್ಯ ಮತ್ತು ನರಸೇಗೌಡರ ಮಗ ಉಗ್ರಾರೆಡ್ಡಿ ಎಂಬುವವರಿಗೆ ಸೇರಿದ್ದು ಎಂದರೆ, ಸಾಕ್ಷಿಯು ಆ ಆಸ್ತಿ ಲಕ್ಷ್ಮಯ್ಯರವರಿಗೆ ಸೇರಿದ್ದು ಅದನ್ನು ಅದಲು ಬದಲು ಮಾಡಿಕೊಂಡಿದ್ದಾರೆ ಎಂದು ಸ್ವತಃ ನುಡಿಯುತ್ತಾರೆ. ಈ ಆಸ್ತಿಯನ್ನು ಅದಲು ಬದಲು ಮಾಡಿಕೊಂಡಿರುವ ಬಗ್ಗೆ ಪಹಣಿ ಪತ್ರಿಕೆಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ನರಸೇಗೌಡರ ಮಗ ಉಗ್ರಾರೆಡ್ಡಿ ರವರ ಕುಟುಂಬದವರು ಈಗಲೂ ಸಹ ಜೀವಂತ ಇದ್ದಾರೆ. ನಿಪಿ.1 ರ ಕಲಂ 9 ಮತ್ತು 12 ರಲ್ಲಿರುವ ಹೆಸರುಗಳು ಉಗ್ರಾರೆಡ್ಡಿ ರವರ ವಂಶಸ್ಥರ ಹೆಸರು ಎಂದರೆ ಸರಿ. ಉಗ್ರಾರೆಡ್ಡಿರವರ ವಾರಸುದಾರರನ್ನು ಈ ದಾವೆಯಲ್ಲಿ ಪಕ್ಷಗಾರರನ್ನಾಗಿ ಸೇರ್ಪಡೆ ಮಾಡಿರುವುದಿಲ್ಲ. ಉಗ್ರಾರೆಡ್ಡಿ ಮೃತಪಟ್ಟ ನಂತರ ಆತನ ವಾರಸುದಾರರು ಮತ್ತು ಲಕ್ಷ್ಮಯ್ಯರವರ ವಾರಸುದಾರರು ಜಂಟಿಯಾಗಿ ದಾವಾ ಐಟಂ ನಂ.1 ರ ಆಸ್ತಿಯಲ್ಲಿ ಸ್ವಾಧೀನ ಹೊಂದಿರುತ್ತಾರೆ ಎಂದರೆ ಸರಿಯಲ್ಲ.

ಸಾಕ್ಷಿಯು ಆ ಆಸ್ತಿ ಲಕ್ಷ್ಮಯ್ಯರವರಿಗೆ ಸೇರಿದ್ದು ಅದಲು ಬದಲು ಮಾಡಿಕೊಳ್ಳುವ ಸಮಯದಲ್ಲಿ ಉಗ್ರಾರೆಡ್ಡಿರವರ ವಾರಸುದಾರರ ಹೆಸರು ನಮೂದಾಗಿರುತ್ತದೆ ಎಂದು ಸ್ವತಃ ನುಡಿಯುತ್ತಾರೆ. ಲಕ್ಷ್ಮಯ್ಯ ಮೃತಪಟ್ಟ ನಂತರ ಆತನ ವಾರಸುದಾರರು ಮತ್ತು ಉಗ್ರಾರೆಡ್ಡಿರವರ ವಾರಸುದಾರರು ಜಂಟಿಯಾಗಿ ಅನುಭವಿಸುತ್ತಿದ್ದಾರೆ ಎಂದರೆ ಸರಿಯಲ್ಲ. ಪ್ರತಿವಾದಿ 6 ಮತ್ತು 7 ರವರು ಲಕ್ಷ್ಮಯ್ಯನ ವಾರಸುದಾರರಾಗಿದ್ದು, ಪ್ರತಿವಾದಿ 6 ಮತ್ತು 7 ಹಾಗೂ ಉಗ್ರಾರೆಡ್ಡಿರವರ ವಾರಸುದಾರರುಗಳೇ ದಾವಾ ಐಟಂ ನಂ.1 ರ ಆಸ್ತಿಯನ್ನು ಅನುಭವಿಸುತ್ತಿದ್ದಾರೆ ಎಂದರೆ ಸರಿಯಲ್ಲ. ದಾವಾ ಐಟಂ ನಂ.1 ರ ಆಸ್ತಿಯಲ್ಲಿ ಉಗ್ರಾರೆಡ್ಡಿರವರ ವಾರಸುದಾರರಿಗೆ ಅರ್ಧ ಭಾಗ ಇದೆ ಎಂದರೆ ಸರಿಯಲ್ಲ. ಇನ್ನುಳಿದ ಅರ್ಧ ಭಾಗದ ಆಸ್ತಿಯಲ್ಲಿ ಪ್ರತಿವಾದಿ 6 ಮತ್ತು 7 ರವರೇ ಅನುಭವಿಸುತ್ತಿದ್ದಾರೆ ಎಂದರೆ ಸರಿಯಲ್ಲ. ಅದರಂತೆ ಖಾತೆ ಮತು ಪಹಣಿಗಳು 6 ಮತ್ತು 7 ನೇ ಪ್ರತಿವಾದಿಗಳ ಹೆಸರಿನಲ್ಲಿಯೇ ಬರುತ್ತಿವೆ ಎಂದರೆ, ಸಾಕ್ಷಿಯು ಅದಲು ಬದಲು ಮಾಡುವ ಸಮಯದಲ್ಲಿ ಈ ರೀತಿ ಆಗಿರುತ್ತದೆ ಎಂದು ಸ್ವತಃ ನುಡಿಯುತ್ತಾರೆ. ದಾವಾ ಐಟಂ ನಂ.1 ರ ಆಸ್ತಿಯಲ್ಲಿ ವಾದಿಯರಿಗೆ ಮತ್ತು ಪ್ರತಿವಾದಿ 1 ರಿಂದ 5 ರವರಿಗೆ ಯಾವುದೇ ಭಾಗದ ಹಕ್ಕು ಇಲ್ಲ ಎಂದರೆ ಸರಿಯಲ್ಲ.

ದಾವಾ ಐಟಂ ನಂ.2 ರ ಆಸ್ತಿ ರಾಮಣ್ಣನ ಅಣ್ಣ ತಮ್ಮಂದಿರಾದ ಎಳೆನರಸಪ್ಪ, ಉಗ್ರಪ್ಪ, ಉಗ್ರಪ್ಪರವರ ತಂದೆ ದಾಸಪ್ಪನವರಿಗೆ ಸೇರಿದ ಆಸ್ತಿ ಎಂದರೆ ಸರಿಯಲ್ಲ. ಈ

ಆಸ್ತಿ ನಮ್ಮ ಒಟ್ಟು ಕುಂಟುಂಬದ ಆಸ್ತಿಯಾಗಿರುತ್ತದೆ. ಆ ಆಸ್ತಿಯನ್ನು ಎಳೆನರಸಪ್ಪ, ಉಗ್ರಪ್ಪ, ಲಕ್ಷ್ಮಯ್ಯರವರುಗಳೇ ಜಂಟಿಯಾಗಿ ಅನುಭವಿಸುತ್ತಾ ಬಂದಿರುತ್ತಾರೆ ಎಂದರೆ ಸರಿ. ದಾವಾ ಐಟಂ ನಂ.2 ರ ಆಸ್ತಿಯನ್ನು ಹೊರತುಪಡಿಸಿದ ಉಳಿದ ಎಲ್ಲಾ ಆಸ್ತಿಗಳಲ್ಲಿ ಭಾಗ ಮಾಡಿಕೊಂಡಿದ್ದೇವೆ ಎಂದರೆ ಸರಿಯಲ್ಲ. ದಾವಾ ಆಸ್ತಿಗಳನ್ನು ಹೊರತುಪಡಿಸಿ ಇನ್ನೂ ಬೇರೆ ಬೇರೆ ಆಸ್ತಿಗಳು ಇದ್ದು, ಅವುಗಳ ಸರ್ವೇ ನಂಬರ್ ಗಳನ್ನು ಈಗ ಹೇಳಲು ಆಗುವುದಿಲ್ಲ. ಆ ಸರ್ವೇ ನಂಬರ್ ಆಸ್ತಿಗಳು ಹೆಚ್ಚಾಗಿದ್ದು, ಅವುಗಳನ್ನು ಈ ದಾವೆಯಲ್ಲಿ ಸೇರ್ಪಡೆ ಮಾಡಿರುವುಲ್ಲ. ದಾವಾ ಐಟಂ ನಂ.2 ರ ಆಸ್ತಿಯ ದಾಖಲೆಗಳು ಪ್ರತಿವಾದಿ 1 ಮತ್ತು 2 ರವರ ಹೆಸರಿನಲ್ಲಿದೆ. ದಾವಾ ಐಟಂ ನಂ.2 ರ ಆಸ್ತಿಯ ದಾಖಲೆಗಳು ಈಗ 1 ಮತ್ತು 2 ನೇ ಪ್ರತಿವಾದಿಯ ತಂಗಿ ವಿಮಲರವರ ಹೆಸರಿನಲ್ಲಿವೆ ಎಂದರೆ ಸರಿ. ಸಾಕ್ಷಿಯು, ಮೋಸ ಮಾಡಿ 1 ಮತ್ತು 2 ನೇ ಪ್ರತಿವಾದಿಗಳು ಅವರ ತಂಗಿಯ ಹೆಸರಿಗೆ ಮಾಡಿದ್ದಾರೆ ಎಂದು ಸ್ವತಃ ನುಡಿಯುತ್ತಾರೆ. ಆ ವಿಮಲರವರನ್ನು ಈ ದಾವೆಯಲ್ಲಿ ಪಕ್ಷಗಾರನ್ನಾಗಿ ಸೇರ್ಪಡೆ ಮಾಡಿರುವುದಿಲ್ಲ. ದಾವಾ ಐಟಂ ನಂ.2 ರ ಆಸ್ತಿಯನ್ನು ಪ್ರತಿವಾದಿ 1 ಮತ್ತು 2 ರವರು ನೊಂದಾಯಿತ ದಾನಪತ್ರದ ಮೂಲಕ ತಮ್ಮ ತಂಗಿ ವಿಮಲರವರಿಗೆ ಮಾಡಿಕೊಟ್ಟಿರುತ್ತಾರೆ. ಈ ರೀತಿ ದಾನ ಮಾಡಿರುವ ವಿಚಾರ ಈ ಪ್ರಕರಣ ದಾಖಲಿಸಿದ ನಂತರ ಗೊತ್ತಾಯಿತು. ಈ ದಾನ ಮಾಡಿರುವ ವಿಚಾರವನ್ನು ನನ್ನ ವಾದ ಪತ್ರದಲ್ಲಾಗಲೀ ಅಥವಾ ಸಾಕ್ಷ್ಯಪ್ರಮಾಣ ಪತ್ರದಲ್ಲಾಗಲೀ ಹೇಳಿರುವುದಿಲ್ಲ.

ನಾನು, ಇತರೆ ವಾದಿಯರು ಹಾಗೂ ಪ್ರತಿವಾದಿ 1 ರಿಂದ 5 ರವರು ಪ್ರತಿವಾದಿ 6 ಮತ್ತು 7 ರವರಿಗೆ ತೊಂದರೆ ಕೊಡುವ ಉದ್ದೇಶದಿಂದ ಈ ಸುಳ್ಳು ದಾವೆ ಸಲ್ಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾ ಐಟಂ ನಂ.2 ರ ಆಸ್ತಿಯಲ್ಲಿ ಪ್ರತಿವಾದಿ 6 ಮತ್ತು 7 ರವರಿಗೆ 1/4 ನೇ ಭಾಗದ ಹಿಸ್ಸೆ ಮತ್ತು ಅಕ್ಕಣ್ಣಪ್ಪನ ಮಕ್ಕಳುಗಳಿಗೆ 1/4 ನೇ ಭಾಗದ ಹಿಸ್ಸಾ ಹಕ್ಕು ಇದೆ ಎಂದರೆ ನನಗೆ ಗೊತ್ತಿಲ್ಲ. ಈ ಎಲ್ಲಾ ವಿಚಾರ ಗೊತ್ತಿದ್ದರೂ ಸಹ ನಾನು, ಇತರ ವಾದಿಯರು, ಪ್ರತಿವಾದಿ 1 ರಿಂದ 5 ರವರು ಉದ್ದೇಶಪೂರ್ವಕವಾಗಿಯೇ ಪ್ರತಿವಾದಿ 6 ಮತ್ತು 7 ರವರಿಗೆ ತೊಂದರೆ ಕೊಡುವ ಉದ್ದೇಶದಿಂದ ಈ ದಾವೆಯನ್ನು ಸಲ್ಲಿಸಿದ್ದೇವೆ ಎಂದರೆ ಸರಿಯಲ್ಲ.

ಈ ಹಂತದಲ್ಲಿ ವಕೀಲರ ವಿನಂತಿ ಮೇರೆಗೆ ಮುಂದುವರಿದ ಪಾಟೀ ಸವಾಲನ್ನು ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ನುಡಿದಂತೆ ಗಣಕೀಕೃತಗೊಳಿಸಲಾಯಿತು)

ಓ.ಹೇ.ಸಾ.ಸ.ಇ.ಒ.

ಪ್ರಧಾನ ಹಿರಿಯ ಸಿವಿಲ್ ಜಡ್ಜ್
ಮತ್ತು ಜೆಎಂಎಫ್‌ಸಿ, ಮಧುಗಿರಿ